## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

### ವಿಶೇಷ ಮೊಕದ್ದಮೆ ಸಂಖ್ಯೆ:- 816/2021

ಪ್ರಾಸಾಃ- 1 ಚಾಸಾಃ- 1

| | | |
|---|---|---|
| ಸಾಕ್ಷಿಯ ಹೆಸರು | : | ಶ್ರಾವಣಿ |
| ಗಂಡನ ಹೆಸರು | : | ಅನುಪ್ ಕುಮಾರ್ |
| ವಯಸ್ಸು | : | 43 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 26.8.2023

### ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನನಗೆ ಚಾಸಾ 2, 3, 10 ರಿಂದ 14 , 16 ರಿಂದ 22 ಗೊತ್ತಿಲ್ಲ . ಚಾಸಾ 15 ನನ್ನ ಗಂಡ . ಚಾಸಾ 29 ರಿಂದ 36 ಗೊತ್ತಿಲ್ಲ . ಮೃತ ಜಯಮ್ಮ ಮತ್ತು ರಾಮಲಕ್ಷ್ಮಿ ನನ್ನ ತಾಯಿ ಮತ್ತು ನನ್ನ ತಂಗಿ ಇರುತ್ತಾರೆ . ನಾವು ಬೋವಿ ಜನಾಂಗಕ್ಕೆ ಸೇರಿರುತ್ತೇವೆ . ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತಿಲ್ಲ . 1 ಮತ್ತು 2 ನೇ ಆರೋಪಿತರನ್ನು ವಿ ಸಿ ಮುಖಾಂತರ ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ .

ನನ್ನ ತಾಯಿ ಮತ್ತು ತಂಗಿ ಇಬ್ಬರು ಫೈನಾನ್ಸ್ ವ್ಯವಹಾರ ಮಾಡುತ್ತಿದ್ದು ಅವರು ಬಹಳಷ್ಟು ಕಡೆ ಓಡಾಡುತ್ತಿದ್ದರು ಮತ್ತು ಅವರು ಪ್ರತ್ಯೇಕವಾಗಿ ಬೆಳಗಲ್ ಕ್ರಾಸ್ ನಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು . ಅವರು ನಮ್ಮ ಮನೆಗೆ ಬಹಳ ದಿನಗಳಿಗೊಮ್ಮೆ ಬಂದು ಹೋಗುತ್ತಿದ್ದರು .

ನಾನು ಮತ್ತು ನಮ್ಮ ಮನೆಯವರು ಆಗಾಗ ಅವರ ಮನೆ ಕಡೆ ಹೋದಾಗ ಅವರನ್ನು ಮಾತನಾಡಿಸಿಕೊಂಡು ಬರುತ್ತಿದ್ದೆನು . 2021 ರ ಮಾರ್ಚ್ ತಿಂಗಳಿನಲ್ಲಿ ನಮ್ಮ ತಾಯಿ ನನಗೆ ಫೋನ್ ಮಾಡಿ ಮನೆಗೆ ಬರುವುದಾಗಿ ಹೇಳಿದಳು ನಂತರ ಅವಳು ಬರಲಿಲ್ಲ . ಯಾವಗಾದರೂ ಬರಬಹುದು ಎಂದು ಸುಮ್ಮನಿದ್ದೆವು . ನಂತರ ನಾನು ನನ್ನ ತಾಯಿಗೆ ಫೋನ್ ಮಾಡಿದಾಗ ಅಕೆಯ ಫೋನಿ ಸ್ವಿಚ್ ಆಫ್ ಆಗಿತ್ತು ಮತ್ತು ಆ ಬಗ್ಗೆ ನನ್ನ ಮಗನಿಗೆ ಅವರ ಮನೆಗೆ ಹೋಗಿ ನೋಡಿ

ಕೊಂಡು ಬರಲು ಕಳುಹಿಸಿದ್ದೆ ಅವನು ಬಂದು ಮನೆಗೆ ಬೀಗ ಹಾಕಿದೆ ಎಂದು ಹೇಳಿದಾಗ ಎಲ್ಲಿಗಾದರೂ ಹೋಗಿರಬಹುದು ಎಂದು ಊಹಿಸಿ ಸುಮ್ಮನಿದ್ದೆ . ಬಹಳ ದಿನಗಳಾದರೂ



ಬರಲಾರದ ಕಾರಣ ನಾನು ನನ್ನ ತಾಯಿ ಜಯಮ್ಮ ಮತ್ತು ನನ್ನ ತಂಗಿ ರಾಮಲಕ್ಷ್ಮಿ ಕಾಣೆಯಾದ ಬಗ್ಗೆ ಮಹಿಳಾ ಪೋ . ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ . ಸಾಕ್ಷಿಗೆ ಕಾಣೆಯಾದ ಕುರಿತು ನೀಡಿದ ದೂರನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ದೂರನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು . ನಾನು ದೂರಿನ ನಂತರ ಪೋಲಿಸರು ನನ್ನ ತಾಯಿ ಜಯಮ್ಮಳ ಮನೆಯ ಹತ್ತಿರ ಪಂಚನಾಮೆ ಮಾಡಿರುತ್ತಾರೆ . ಸಾಕ್ಷಿಗೆ ಸದರಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು . ಸಾಕ್ಷಿಗೆ ನಿಪಿ-2 ರ ಕಾಲಕ್ಕೆ ತೆಗೆದ 2 ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದು ಸದರಿ ಪೋಟೋಗಳನ್ನು ರಾಗ ನಿಪಿ-3 ಎಂದು ಗುರುತಿಸಲಾಯಿತು .

ನನಗೆ ಚಾಸಾ 21 ಮತ್ತು 22 ರವರು ಗೊತ್ತಿಲ್ಲ . ಅವರು ನನಗೆ 1 ನೇ ಆರೋಪಿ ನನ್ನ ತಾಯಿ ಜಯಮ್ಮ ಮತ್ತು ನನ್ನ ತಂಗಿ ರಾಮಲಕ್ಷ್ಮಿ ಯನ್ನು ಕರೆದುಕೊಂಡು ಹೋದ ಬಗ್ಗೆ ಹೇಳಿಲ್ಲ . 1 ನೇ ಆರೋಪಿಯ ವಿರುದ್ಧ ನನ್ನ ತಾಯಿ ಮತ್ತು ತಂಗಿಯನ್ನು ಅಪಹರಿಸಿದ ಬಗ್ಗೆ ಯಾವುದೇ ದೂರನ್ನು ನೀಡಿಲ್ಲ . ಸಾಕ್ಷಿಗೆ ಸದರಿ ದೂರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ದೂರನ್ನು ಈಗ ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು .

ಅಪಹರಣದ ದೂರು ನೀಡಿದ ನಂತರ ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ . ಸಾಕ್ಷಿಗೆ ದಿಃ 7-6-2021 ರಂದು ಮಾಡಿದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗ ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು . ನಿಪಿ-5 ರ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ-5 ರ ಕಾಲಕ್ಕೆ ತಯಾರಿಸಿದ ನಕಾಶೆಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಸದರಿ ನಕಾಶೆಯನ್ನು ರಾಗ ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು . ನಿಪಿ-6 ರ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ-5 ರ ಕಾಲಕ್ಕೆ ತೆಗೆದ ಪೋಟೋವನ್ನು ತೋರಿಸಲಾಗಿ ನೋಡಿ

ಗುರುತಿಸಿದ್ದು ಸದರಿ ಫೋಟೊವನ್ನು ಈಗ ನಿಪಿ-7 ಎಂದು ಗುರುತಿಸಲಾಯಿತು . ನಿಪಿ-7 ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ .



1 ನೇ ಆರೋಪಿಯನ್ನು ನನ್ನ ಸಮಕ್ಷಮ ಠಾಣೆಗೆ ಕರೆಸಿ ವಿಚಾರ ಮಾಡಿಲ್ಲ . ಉಳಿದ ಆರೋಪಿತರ ಬಗ್ಗೆ ನನಗೆ ಏನೂ ಗೊತ್ತಿಲ್ಲ . ಪೋಲೀಸರು ನನ್ನನ್ನು ಫೆಡ್ ಬಾಂಕ್ ಗೆ ಕರೆಸಿದ್ದು ಅಲ್ಲಿ ನನ್ನ ಸಮಕ್ಷಮ ಒಂದು ಪಂಚನಾಮೆ ಮಾಡಿರುತ್ತಾರೆ . ಸಾಕ್ಷಿಗೆ ಸದರಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗ ನಿಪಿ- 8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು . ನಿಪಿ-8 ರ ಮಾಹಿತಿ ಇಲ್ಲ . ಆದರೆ ಪೊಲೀಸರು ನಮಗೆ ಅಲ್ಲಿ ನನ್ನ ತಾಯಿ ಮತ್ತು ನನ್ನ ತಂಗಿಗೆ ಸಂಬ್ಬಂಧಿಸಿದ ಎರಡು ಬಂಗಾರದ ಸರಗಳನ್ನು ತೋರಿಸಿರುತ್ತಾರೆ . ಸದರಿ ಬ್ಯಾಂಕ್ ನಲ್ಲಿ ಎರಡು ಬಂಗಾರದ ಸರಗಳನ್ನು ಯಾರು ಇಟ್ಟಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ .

ಸಾಕ್ಷಿಗೆ ಸದರಿ ನಿಪಿ-8 ರ ಕಾಲಕ್ಕೆ ತೆಗೆದ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಭಾವಚಿತ್ರ ಇರುವ ಬಗ್ಗೆ ನೋಡಿ ಗುರುತಿಸಿದ್ದು ಸದರಿ 7 ಫೋಟೋಗಳನಲ್ನು ಒಟ್ಟಾಗಿ ನಿಪಿ-9 ಎಂದು ಗುರುತಿಸಲಾಯಿತು . ನಿಪಿ-9 ರಲ್ಲಿ ಕಂಡು ಬರುವ ಇತರ ವ್ಯಕ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ . ಚಾಸಾ 24 ಗೊತ್ತಿಲ್ಲ ಮತ್ತು ಚಾಸಾ 33 ಗೊತ್ತಿಲ್ಲ .

ಪೊಲೀಸರು ನನ್ನ ಸಮಕ್ಷಮ ನನ್ನ ತಾಯಿಯ ಮನೆಯ ಬೀಗ ಹೊಡೆದು ಯಾವುದೇ ಪಂಚನಾಮೆ ಮಾಡಿಲ್ಲ . ಸಾಕ್ಷಿಗೆ ಮೃತ ಜಯಮ್ಮ ರವರ ಮನೆ ಶೋಧನಾ ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೆಾೕಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ರಾೕ ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು . ನಿಪಿ-10 ರ ಮಾಹಿತಿ ಇಲ್ಲ. ನನ್ನ ಸಮಕ್ಷಮ ನನ್ನ ತಾಯಿಯ ಮನೆ ಬೀಗ ಹೊಡೆದು ಅಲ್ಲಿ ಏನನ್ನೂ ಜಪ್ತು ಮಾಡಿಕೊಂಡಿಲ್ಲ, ಸಾಕ್ಷಿಗೆ 4 ನೇ ಆರೋಪಿಗೆ ಸೇರಿದ ಒಂದು ಆರ್ ಸಿ ಬುಕ್ ಮತ್ತು ರೂ . 20 ಸಾವಿರ ಮೌಲ್ಯದ ಪ್ರಾಂಸರಿ ನೋಟ್ ತೋರಿಸಲಾಗಿ ನೋಡೀ ಗುರುತಿಸಿರುವುದಿಲ್ಲ . ನಿಪಿ-10 ರ ಕಾಲಕ್ಕೆ ತೆಗೆದ ಫೋಟೋಗಳನ್ನು ಸಾಕ್ಷಿಗೆ ತೋರಿಸಲಾಗಿ ನೋಡಿ ಗುರುತಿಸಿದ್ದು ಸದರಿ 4 ಫೋಟೋಗಳನ್ನು ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಯಿತು . ನಿಪಿ-11 ನ್ನು ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಗೊತ್ತಿಲ್ಲ .

ಈ ಹಂತದಲ್ಲಿ ನ್ಯಾಯಾಲಯದ ಸಮಯದ ಅಭಾವದಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು  ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.